## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ

ನಂ. 09, 2ನೇ ಮಹಡಿ, 1ನೇ ಮುಖ್ಯರಸ್ತೆ, (ಹೊರವರ್ತುಲ ರಸ್ತೆ),ಕೆಂಗೇರಿ ಉಪನಗರ,ಬೆಂಗಳೂರು-60.

ಸಂಖ್ಯೆ : ಸ.ಇಂ/ವಾ-130/ವಾರ್ಡ್‌ಸಭೆ/2022-23

ದಿನಾಂಕ : 20/05/2022

### ವಾರ್ಡ್-130ರ ವಾರ್ಡ್ ಸಭೆಯ ನಡವಳಿ.

**ದಿನಾಂಕ: 20/05/2022 ರಂದು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿಯ ನಡುವಳಿಗಳು**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿ ನೌಕರರು ಮತ್ತು ಸದಸ್ಯರುಗಳು:**

| ಕ್ರ.ಸಂ | ಅಧಿಕಾರಿಯವರ | ಪದನಾಮ | ದೂರವಾಣಿ ಸಂಖ್ಯೆ | ಹಾಜರಾತಿ |
|---|---|---|---|---|
| 1. | ಶ್ರೀ ಅವಿನಾಶ್ | ನೋಡಲ್ ಅಧಿಕಾರಿ<br>ಮುಖ್ಯ ಲೆಕ್ಕ ಪರಿಶೋಧನಾಧಿಕಾರಿಗಳು | 9880272228 | |
| 2. | ಶ್ರೀ ಜಗದೀಶ್ ಬಿ ಆರ್ | ಸಹಾಯಕ ಇಂಜಿನಿಯರ್<br>ಬಿಬಿಎಂಪಿ | 9986338038 | |
| 3. | ಶ್ರೀಮತಿ ಗೀತಾ | ಕಾರ್ಯಪಾಲಕ ಅಭಿಯಂತರರು<br>ಕೆರೆಗಳ ವಿಭಾಗ | 9480685213 | |
| 4. | ಶ್ರೀ ರೇಣುಕುಮಾರ್ | ಕಾರ್ಯಪಾಲಕ ಅಭಿಯಂತರರು<br>(ಯೋಜನಾ ವಿಭಾಗ)<br>ಬಿ.ಡಬ್ಲ್ಯೂ.ಎಸ್.ಎಸ್.ಬಿ | 9632270148 | |
| 5. | ಶ್ರೀ ಚಂದ್ರಶೇಖರ್ | ಸಹಾಯಕ ಕಾರ್ಯಪಾಲಕ<br>ಅಭಿಯಂತರರು<br>ಯೋಜನಾ ವಿಭಾಗ, ಬಿಬಿಎಂಪಿ | 8971318337 | |
| 6. | ಶ್ರೀ ಅಶೋಕ್ ಗೌಡ | ಸಹಾಯಕ ಕಾರ್ಯಪಾಲಕ<br>ಅಭಿಯಂತರರು<br>ಬಿ.ಡಬ್ಲ್ಯೂ.ಎಸ್.ಎಸ್.ಬಿ | 9591987962 | |
| 7. | ಶ್ರೀ ವಿಜಯಮಾಲ | ಸಹಾಯಕ ಕಾರ್ಯಪಾಲಕ<br>ಅಭಿಯಂತರರು<br>ಬೃಹತ್ ನೀರುಗಾಲುವೆ | 9620296594 | |
| 8. | ಶ್ರೀಮತಿ ನಿರ್ಮಲ ವೈ.ಎನ್ | ಸಹಾಯಕ ಅಭಿಯಂತರರು<br>ಬಿ.ಡಬ್ಲ್ಯೂ.ಎಸ್.ಎಸ್.ಬಿ | 7760963672 | |
| 9. | ಶ್ರೀ ರವಿ | ಉಪ ತಹಶೀಲ್ದಾರ್ | 9448247288 | |
| 10. | ಶ್ರೀಮತಿ ರೂಪ | ಸಹಾಯಕ ಇಂಜಿನಿಯರ್ ಬೆಸ್ಕಾಂ | 9449870366 | |
| 11. | ಗವಿಸಿದ್ದಯ್ಯ | ಸಹಾಯಕ ಇಂಜಿನಿಯರ್<br>(ಬೀದಿ ದೀಪ, ರಾರಾನವ) | 9481700799 | |
| 12. | ಶ್ರೀ ಬಿ.ಕೆ ಚಂದ್ರಶೇಖರ್ | ಸಹಾಯಕ ಇಂಜಿನಿಯರ್-ಬೆಸ್ಕಾಂ | 9449870336 | |
| 13. | ಕುಮಾರಿ ನಾಗರತ್ನ | ಸಹಾಯಕ ಇಂಜಿನಿಯರ್ | 8050833940 | |

| | | | | |
|---|---|---|---|---|
| | | ಬಿ.ಡಬ್ಲ್ಯೂ.ಎಸ್.ಎಸ್.ಬಿ | | |
| 14. | ಶ್ರೀಮತಿ ಸಿಂಧು | ಸಹಾಯಕ ಇಂಜಿನಿಯರ್ ಬಿ.ಡಬ್ಲ್ಯೂ.ಎಸ್.ಎಸ್.ಬಿ. (ಯೋಜನಾ ವಿಭಾಗ) | 8147222880 | |
| 15. | ಡಾ॥ ಕವಿತ | ಆರೋಗ್ಯ ವೈದ್ಯಾಧಿಕಾರಿ | 9741260512 | |
| 16. | ಶ್ರೀ ನಾಗರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.130, ಬಿಬಿಎಂಪಿ | 9945886188 | |
| 17. | ಶ್ರೀ ವಿನಯ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.130, ಬಿಬಿಎಂಪಿ | 9880243077 | |
| 18. | ಶ್ರೀ ಮಲ್ಲಿಕಾರ್ಜುನ | ಟ್ರಾಫಿಕ್ ಸರ್ಕಲ್ ಇನ್ಸ್‌ಪೆಕ್ಟರ್ ಕೆಂಗೇರಿ | 9480806021 | |
| 19. | ಶ್ರೀ ಮೋಹನ್ | ಮೌಲ್ಯ ಮಾಪಕರು ಕೆಂಗೇರಿ ಉಪ ವಲಯ | 9986646186 | |
| 20. | ಶ್ರೀ ವಸಂತ್ | ವೃತ್ತ ನಿರೀಕ್ಷಕರು ಕೆಂಗೇರಿ ಪೋಲಿಸ್ ಠಾಣೆ | 9480801724 | |
| 21. | ಶ್ರೀ ವಸಂತ್ ಕುಮಾರ್.ಎಂ | ಕೆಲಸ ಪರಿವೀಕ್ಷಕರು ವಾರ್ಡ್ ನಂ.130, ಬಿಬಿಎಂಪಿ | 9880598651 | |
| 22. | ಶ್ರೀ ರಮೇಶ್ | ಪಶುಸಂಗೋಪನೆ, ಬಿಬಿಎಂಪಿ | 9480685386 | |
| 23. | ಡಾ॥ ಮಂಜುನಾಥ್ ಸಿಂಧೆ | ರಾಜರಾಜೇಶ್ವರಿನಗರ ವಲಯ | 9480685206 | |
| 24. | ಶ್ರೀ ಕಲ್ಯಾಣ್ ಕುಮಾರ್ | ಜಲಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ. | 994582039 | |
| 25. | ಶ್ರೀ ಅಭಿನಂದನ್ ಹಳಿಕೆ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. | 8095770754 | |
| 26. | ಶ್ರೀ ದೀಪಾ.ಜೆ | ಬಿ.ಡಬ್ಲ್ಯೂ.ಎಸ್.ಎಸ್.ಬಿ ಡಬ್ಲ್ಯೂ.ಡಬ್ಲ್ಯೂ.ಎಂ.ವಿ.ವಿ–2 | 9945953666 | |
| 27. | ಶ್ರೀ ಶಬರಿ | ಯು.ಜಿ.ಡಿ, 110 ಹಳ್ಳಿಗಳು | 7619609363 | |
| 28. | ಶ್ರೀಮತಿ ಅಮೃತ ಸಾಯಿ | ಸಹಾಯಕ ಕಾರ್ಯಪಾಲಕ ಅಭಿಯಂತರರು ಕೆರೆಗಳು | 9632347753 | |
| 29. | ಶ್ರೀ ಮೂರ್ತಿ | ಬೀದಿ ದೀಪ ನಿರ್ವಹಣೆ (ಗುತ್ತಿಗೆದಾರರು) | 9740844137 | |
| 30. | ಶ್ರೀ ದಿನೇಶ್ | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ (ಸರ್ ಎಂ.ವಿ. ಲೇಔಟ್) | 9845444110 | |
| 31. | ಶ್ರೀ ಸಾಯಿ ಸಂದೇಶ್ | ಸಹಾಯಕ ಅಭಿಯಂತರರು ಎಸ್.ಡಬ್ಲ್ಯೂ.ಡಿ | 9632440223 | |
| 32. | ಶ್ರೀ ಜಗದೀಶ್.ವಿ | ಅರಣ್ಯ ಇಲಾಖೆ | 9880516322 | |
| 33. | ಶ್ರೀ ತಿಪ್ಪೇಸ್ವಾಮಿ ಬಿ.ಎಸ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ | 9060163898 | |

REDMI NOTE 8 PRO
AI QUAD CAMERA

| | | | | |
|---|---|---|---|---|
| | | 110 ಹಳ್ಳಿಗಳು | | |
| 34. | ಶ್ರೀಮತಿ ಹರ್ಷಿತ ಆರ್ | ಕಿರಿಯ ಅಭಿಯಂತರರು ಕೆರೆಗಳು, ಬಿಬಿಎಂಪಿ | 9071093678 | |
| 35. | ಶ್ರೀ ಚಂದ್ರಪ್ಪ | ಅರಣ್ಯ ಅಧಿಕಾರಿಗಳು | 9164042566 | |
| 36. | ಚಂದ್ರಶೇಖರ್ | ಉದ್ಯಾನವನ ನಿರ್ವಹಣೆ | 9845355689 | |

| ಕ್ರ ಸಂ | ಸದಸ್ಯರ ಹೆಸರು | ಪದನಾಮ | ದೂರವಾಣಿ ಸಂಖ್ಯೆ | ಹಾಜರಾತಿ |
|---|---|---|---|---|
| 1. | ಶ್ರೀ ಅನಿಲ್‌ಕುಮಾರ್ | ವಾರ್ಡ್ ಕಮಿಟಿ ಸದಸ್ಯರು | 9148844823 | |
| 2. | ಶ್ರೀಮತಿ ಸಬೀಹಾ ಅಂಜುಂ | ವಾರ್ಡ್ ಕಮಿಟಿ ಸದಸ್ಯರು | 9844239162 | |
| 3. | ಶ್ರೀ ರಮೇಶ್ ಗೌಡ | ವಾರ್ಡ್ ಕಮಿಟಿ ಸದಸ್ಯರು | 9008002069 | |
| 4. | ಶ್ರೀ ರಾಮಣ್ಣ (ನಾಗದೇವನಹಳ್ಳಿ) | ವಾರ್ಡ್ ಕಮಿಟಿ ಸದಸ್ಯರು | 9964477333 | |
| 5. | ಶ್ರೀ ಶರಣಪ್ಪ ಅಂಗಡಿ | ವಾರ್ಡ್ ಕಮಿಟಿ ಸದಸ್ಯರು | 9880781644 | |
| 6. | ಶ್ರೀ ಗಿರೀಶ್ | ವಾರ್ಡ್ ಕಮಿಟಿ ಸದಸ್ಯರು | 9036088558 | |
| 7. | ಶ್ರೀಮತಿ ಪ್ರೇಮಾ ನಾಗಯ್ಯ | ವಾರ್ಡ್ ಕಮಿಟಿ ಸದಸ್ಯರು | 9845733617 | |
| 8. | ಶ್ರೀ ಕದರಪ್ಪ | ವಾರ್ಡ್ ಕಮಿಟಿ ಸದಸ್ಯರು | 9845796985 | |
| 9. | ಶ್ರೀ ಶಶಿಕುಮಾರ್ | ವಾರ್ಡ್ ಕಮಿಟಿ ಸದಸ್ಯರು | 9916183333 | |
| 10. | ಶ್ರೀ ಪ್ರಕಾಶ್ ಗೌಡ | ವಾರ್ಡ್ ಕಮಿಟಿ ಸದಸ್ಯರು | 9902961735 | |
| 11. | ಶ್ರೀ ಶ್ರೀನಿವಾಸ್ ಮೂರ್ತಿ | ವಾರ್ಡ್ ಕಮಿಟಿ ಸದಸ್ಯರು | 9845518763 | |
| 12. | ಶ್ರೀ ಜಯರಾಮು | ವಾರ್ಡ್ ಕಮಿಟಿ ಸದಸ್ಯರು | 9845408277 | |
| 13. | ಶ್ರೀ ಜಿ.ಸತ್ಯ | ವಾರ್ಡ್ ಕಮಿಟಿ ಸದಸ್ಯರು | 9740785505 | |
| 14. | ಶ್ರೀ ಪ್ರದೀಪ | ವಾರ್ಡ್ ಕಮಿಟಿ ಸದಸ್ಯರು | 9972242950 | |
| 15. | ಶ್ರೀ ಪ್ರಕಾಶ್ | ವಾರ್ಡ್ ಕಮಿಟಿ ಸದಸ್ಯರು | 8105878004 | |
| 16. | ಬಸವರಾಜು ಓ ಎಂ | ವಾರ್ಡ್ ಕಮಿಟಿ ಸದಸ್ಯರು | 9886181525 | |

| | | | | |
|---|---|---|---|---|
| 17. | ಶ್ರೀ ಶೇಖರ್ (ಮೇಸ್ತ್ರಿ) | ವಾರ್ಡ್ ಕಮಿಟಿ ಸದಸ್ಯರು | 9945406222 | |
| 18. | ಶ್ರೀ ರಾಮು (ದುಬಾಸಿ ಪಾಳ್ಯ) | ವಾರ್ಡ್ ಕಮಿಟಿ ಸದಸ್ಯರು | 9448701630 | |
| 19. | ಬಿ. ಮಂಚಯ್ಯ | ವಾರ್ಡ್ ಕಮಿಟಿ ಸದಸ್ಯರು | 9742697694 | |

ವಾರ್ಡ್ ನಂ.130 ಉಲ್ಲಾಳ ವಾರ್ಡ್‌ನ ಸಹಾಯಕ ಇಂಜಿನಿಯರ್ ಹಾಗೂ ಸದಸ್ಯ ಕಾರ್ಯದರ್ಶಿಯವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿ ನೌಕರರು ಮತ್ತು ವಾರ್ಡ್ ಕಮಿಟಿ ಸದಸ್ಯರನ್ನು ಸ್ವಾಗತಿಸಿದರು.

ನೋಡಲ್ ಅಧಿಕಾರಿಗಳು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ವಾರ್ಡಿನ ವ್ಯಾಪ್ತಿಯಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು ಮತ್ತು ವಾರ್ಡ್ ಕಮಿಟಿ ಸದಸ್ಯರುಗಳಿಂದ ಮಾಹಿತಿ ಪಡೆದರು.

ಸಭೆಯಲ್ಲಿ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

1) ವಾರ್ಡ್ ಸಂಖ್ಯೆ:-130ರ ನೋಡಲ್ ಅಧಿಕಾರಿಯವರು ಕೋವಿಡ್-19ರ ಸಾಂಕ್ರಾಮಿಕ ರೋಗದ ಬಗ್ಗೆ ಹಾಗೂ ಸರ್ಕಾರ ಮತ್ತು ಬಿ.ಬಿ.ಎಂ.ಪಿ. ವತಿಯಿಂದ ನೀಡುತ್ತಿರುವ ಸೌಲಭ್ಯ/ಸೌವಲತ್ತುಗಳು ಮತ್ತು ಕೋವಿಡ್-19 ಪರೀಕ್ಷೆಯ ಬಗ್ಗೆ ಸವಿಸ್ತಾರವಾಗಿ ಸಭೆಗೆ ವಿವರಿಸಿದರು. ಕೋವಿಡ್-19ರ ಲಸಿಕೆಯನ್ನು ಪಡೆಯಲು ಸಾರ್ವಜನಿಕರು ಆರೋಗ್ಯ ಪರಿವೀಕ್ಷಕರು ಮತ್ತು ಆರೋಗ್ಯಾಧಿಕಾರಿಗಳನ್ನು ಸಂಪರ್ಕಿಸಿ ಸಹಕಾರ ಪಡೆದುಕೊಳ್ಳಲು ಸಭೆಯಲ್ಲಿ ತಿಳಿಸಿದರು. ಅಲ್ಲದೇ ಸುರಕ್ಷತಾ ಕ್ರಮ ವಹಿಸಿ ಮಾಸ್ಕ್ ಹಾಗೂ ಸ್ಯಾನಿಟೈಸರ್ ಖಡ್ಡಾಯವಾಗಿ ಉಪಯೋಗಿಸಲು ಸಭೆಯಲ್ಲಿ ತಿಳಿಸಿದರು ಹಾಗೂ ಹಾಗೂ ಇತ್ತಿಗೆ ಕೋವಿಡ್-19ರ ರೂಪಾಂತರಿಯಾದ ವೈರಾಣು ಬೆಂಗಳೂರಿನಲ್ಲಿ ಪತ್ತೆಯಾಗಿದ್ದು, ಕೋವಿಡ್ ನಾಲ್ಕನೇ ಅಲೆಯು ಹಿನ್ನೆಲೆಯಲ್ಲಿ ಮಾಸ್ಕ್ ಹಾಗೂ ಸ್ಯಾನಿಟೈಝರ್‌ನ್ನು ಕಡ್ಡಾಯವಾಗಿ ಬಳಸಲು ಹಾಗೂ ಕೋವಿಡ್ ಸುರಕ್ಷತಾ ನಿಯಮಾವಳಿಯನ್ನು ತಪ್ಪದೇ ಪಾಲಿಸಲು ಸಭೆಯಲ್ಲಿ ಹಾಜರಿದ್ದ ಎಲ್ಲಾ ನಿವಾಸಿಗಳಿಗೆ ಹಾಗೂ ಬಡಾವಣೆಯ ಪ್ರತಿನಿಧಿಗಳಿಗೆ ತಿಳಿಸಲಾಯಿತು ಮತ್ತು ಕೋವಿಡ್ ಬೂಸ್ಟರ್ ಲಸಿಕೆಗಳ ಸದುಪಯೋಗ ಪಡೆಯಲು ಭಾಗವಹಿಸಿದ್ದ ಎಲ್ಲರಿಗೂ ಕೋರಲಾಯಿತು.

2) ವಾರ್ಡ್ ನಂ.130ರ ವ್ಯಾಪ್ತಿಯಲ್ಲಿ ಬರುವ ದೊಡ್ಡಗೊಲ್ಲರಹಟ್ಟಿಯಲ್ಲಿ ಬೋರ್‌ವೆಲ್ ಪಂಪ್‌ಸೆಟ್‌ನ್ನು ದುರಸ್ಥಿಪಡಿಸುವಂತೆ ಶ್ರೀ ಶರಣಪ್ಪ(ನಾಗರೀಕರು) ರವರು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ

REDMI NOTE 8 PRO
AI QUAD CAMERA

ವಾರ್ಡ್‌ನ ಸಹಾಯಕ ಅಭಿಯಂತರರು ಮಾತನಾಡಿ ಈಗಾಗಲೇ ವಾರ್ಡ್ ನಂ.130ರ ವ್ಯಾಪ್ತಿಯಲ್ಲಿ ಇರುವ ಬೋರ್‌ವೆಲ್‌ಗಳ ದುರಸ್ಥಿ ಕಾಮಗಾರಿಯು ಪ್ರಗತಿಯಲ್ಲಿದ್ದು, ಶೀಘ್ರವಾಗಿ ಸದರಿ ಬೋರ್‌ವೆಲ್ ಪಂಪ್‌ಸೆಟ್‌ನ್ನು ದುರಸ್ಥಿ ಕಾರ್ಯವನ್ನು ಮಾಡಿಸಿಕೊಡುವುದಾಗಿ ತಿಳಿಸಿದರು.

3) ವಾರ್ಡ್ ನಂ.130ರ ವ್ಯಾಪ್ತಿಯಲ್ಲಿ ಬರುವ ಅನ್ನಪೂರ್ಣೇಶ್ವರಿ ಬಡಾವಣೆ ಹಾಗೂ ದೊಡ್ಡಗೊಲ್ಲರಹಟ್ಟಿಯಲ್ಲಿನ ರಸ್ತೆಗಳಲ್ಲಿ ರಸ್ತೆ ಗುಂಡಿಗಳು ಉಂಟಾಗಿದ್ದು, ಸದರಿ ರಸ್ತೆ ಗುಂಡಿಗಳನ್ನು ಮುಚ್ಚಲು ಶ್ರೀಮತಿ ಪ್ರೇಮ ನಾಗಯ್ಯ (ವಾರ್ಡ್ ಕಮಿಟಿ ಸದಸ್ಯರು) ರವರು ಸಭೆಯಲ್ಲಿ ಕೋರಿದರು. ಈ ಬಗ್ಗೆ ವಾರ್ಡ್‌ನ ಸಹಾಯಕ ಅಭಿಯಂತರರು ಮಾತನಾಡಿ ವಾರ್ಡ್ ನಂ.130ರ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿಯು ಪ್ರಗತಿಯಲ್ಲಿದ್ದು, ಸದರಿ ರಸ್ತೆಗುಂಡಿಗಳನ್ನು ಮುಚ್ಚಲು ಕ್ರಮ ವಹಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

4) ವಾರ್ಡ್ ನಂ.130ರ ವ್ಯಾಪ್ತಿಯಲ್ಲಿ ಬರುವ ಕೆರೆಗಳಿಗೆ ತ್ಯಾಜ್ಯ ನೀರು ಸೇರುತ್ತಿರುತ್ತದೆ. ಜ್ಞಾನಭಾರತಿ ದುಬಾಸಿ ಪಾಳ್ಯ ಕೆರೆಯನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ ಇಲ್ಲಿನ ವಾಕಿಂಗ್‌ಟ್ರ್ಯಾಕ್‌ಗಳು ಹಾಳಾಗಿದ್ದು ದುರಸ್ಥಿ ಪಡಿಸಿದ ಸಾರ್ವಜನಿಕರ ವಾಯು ವಿಹಾರಕ್ಕೆ ಅನುವು ಮಾಡಿಕೊಡುವಂತೆ ಮತ್ತು ಇಲ್ಲಿನ ರಕ್ಷಣಾ ಸಿಬ್ಬಂದಿಯವರು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲದಿರುವ ಬಗ್ಗೆ ಶ್ರೀ ಕದರಪ್ಪರವರು (ವಾರ್ಡ್ ಕಮಿಟಿ ಸದಸ್ಯರು) ಸಭೆಯಲ್ಲಿ ತಿಳಿಸುತ್ತಾ, ಈ ವಿಷಯದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮಕೈಗೊಳ್ಳುವಂತೆ ಸೂಚಿಸಲು ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸದರಿ ವಿಷಯದ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳುವಂತೆ ಸಹಾಯಕ ಅಭಿಯಂತರರು, ತ್ಯಾಜ್ಯ ನೀರು ನಿರ್ವಹಣೆ ರವರಿಗೆ ಸಭೆಯಲ್ಲಿ ತಿಳಿಸಿದರು.

5) ವಾರ್ಡ್ ನಂ.130ರ ವ್ಯಾಪ್ತಿಯ ಶಿರ್ಕೆ ಸರ್ಕಲ್‌ನಲ್ಲಿ ಇರುವ ಗೌಡ ಆರ್ಕಿಡ್ ಹೈಪರ್ ಮಾರ್ಕೆಟ್ ಮುಂಭಾಗದಲ್ಲಿ ವಾಹನಗಳನ್ನು ಪಾದಾಚಾರಿ ಮಾರ್ಗಗಳಲ್ಲಿ ನಿಲ್ಲಿಸಿ ಪಾದಾಚಾರಿಗಳು ಹಾಗೂ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿರುವುದರ ಬಗ್ಗೆ ವಾರ್ಡ್ ಕಮಿಟಿ ಸಭೆಯಲ್ಲಿ ಸಾರ್ವಜನಿಕರು ದೂರು ಸಲ್ಲಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಟ್ರಾಫಿಕ್ ಪೋಲೀಸ್, ಜ್ಞಾನಭಾರತಿ ಪೋಲೀಸ್‌ಠಾಣೆರವರಿಗೆ ಸದರಿ ಸ್ಥಳಗಳಲ್ಲಿ ಪಾದಾಚಾರಿ ಮಾರ್ಗಗಳಿಂದ ವಾಹನಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ತಿಳಿಸುವುದಾಗಿ ಸಭೆಗೆ ತಿಳಿಸಿದರು.

6) ವಾರ್ಡ್ ನಂ.130ರ ವ್ಯಾಪ್ತಿಯಲ್ಲಿ ವಿದ್ಯುತ್ ತಂತಿಗಳ ಮೇಲೆ ಭಾಗಿರುವ ಮರದ ಕೊಂಬೆಗಳನ್ನು ತೆರವುಗೊಳಿಸುವಂತೆ ಸಾರ್ವಜನಿಕರು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು, ಬೆಸ್ಕಾಂ ರವರಿಗೆ ಸದರಿ ದೂರಿನ ಬಗ್ಗೆ ಕ್ರಮ ವಹಿಸಲು ತಿಳಿಸಿದರು.

7) ವಾರ್ಡ್ ನಂ.130ರ ವ್ಯಾಪ್ತಿಯ ಅಮ್ಮ ಆಶ್ರಮ ರಸ್ತೆಯಲ್ಲಿರುವ ಇರುವ ಪುನೀತ್ ಉದ್ಯಾನವನವನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲವೆಂದು ವಾರ್ಡ್ ಕಮಿಟಿ ಸದಸ್ಯರು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸದರಿ ಉದ್ಯಾನವನದ ನಿರ್ವಹಣೆಯನ್ನು ಮಾಡಲು ಅಧೀಕ್ಷಕರಿಗೆ ಪತ್ರದ ಮುಖೇನ ತಿಳಿಸುವುದಾಗಿ ಸಭೆಗೆ ತಿಳಿಸಿದರು.

8) ವಾರ್ಡ್ ನಂ.130ರ ವ್ಯಾಪ್ತಿಯಲ್ಲಿನ ದುಬಾಸಿಪಾಳ್ಯದಲ್ಲಿ ಇರುವ ಶುದ್ಧ ಕುಡಿಯುವ ನೀರಿನ ಘಟಕವು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂದು ಸಾರ್ವಜನಿಕರು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಗುತ್ತಿಗೆದಾರರಿಂದಲೇ ಸದರಿ ಶುದ್ಧ ಕುಡಿಯುವ ನೀರಿನ ಘಟಕದ ನಿರ್ವಹಣೆ ಮಾಡಿಸುವಂತೆ ವಾರ್ಡ್‌ನ ಸಹಾಯಕ ಅಭಿಯಂತರರಿಗೆ ತಿಳಿಸಿದರು.

ಅಂತಿಮವಾಗಿ ವಾರ್ಡ್‌ನ ಎಲ್ಲಾ ವಾರ್ಡ್ ಕಮಿಟಿಯ ಸದಸ್ಯರಗಳ ಮತ್ತು ವಿವಿಧ ಸಂಘ ಸಂಸ್ಥೆಗಳು ಜೊತೆಗೂಡಿ ಸಮನ್ವಯ ಸಾಧಿಸಿ ಕುಂದು ಕೊರತೆಗಳನ್ನು ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಎಲ್ಲಾ ಅಧಿಕಾರಿ ವರ್ಗದವವರಿಗೆ ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಅಭಿಷೇಕ್)
ಮುಖ್ಯ ಲೆಕ್ಕ ಪರಿಶೋಧನಾಧಿಕಾರಿಗಳು
ಹಾಗೂ ನೋಡಲ್ ಅಧಿಕಾರಿ,
ವಾರ್ಡ್‌ನಂ.130, ಉಲ್ಲಾಳ
ಕೆಂಗೇರಿ ಉಪ ವಿಭಾಗ
ಬಿ.ಬಿ.ಎಂ.ಪಿ.,ಬೆಂಗಳೂರು.

<u>ಪ್ರತಿಯನ್ನು:</u>

1) ವಲಯ ಆಯುಕ್ತರು ಹಾಗೂ ವಿಶೇಷ ಆಯುಕ್ತರು(ಆಡಳಿತ) ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ತರಲು ಅವರ ಆಪ್ತ ಸಹಾಯಕರಿಗೆ ಸಲ್ಲಿಸಿದೆ.
2) ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆಂ.ಉ.ವಿ/ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ(ಯಶವಂತಪುರ) ರವರ ಮಾಹಿತಿಗಾಗಿ ಕಳುಹಿಸಿದೆ.
6) ಎಲ್ಲಾ ವಾರ್ಡ್ ಕಮಿಟಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
7) ಕಛೇರಿ ಪ್ರತಿ